| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 60 + 14 = 74 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16

Total No. of Questions : 60 + 14 = 74 ] [ Total No. of Printed Pages : 16

**ಸಂಕೇತ ಸಂಖ್ಯೆ : 85-K** **ವಿಷಯ : ಸಮಾಜ ವಿಜ್ಞಾನ**

**Code No. : 85-K** **Subject : SOCIAL SCIENCE**

(ಕನ್ನಡ ಭಾಷಾಂತರ)

( Kannada Version )

ದಿನಾಂಕ : 02. 04. 2009 ] [ Date : 02. 04. 2009

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-30 A.M. to 1-30 P.M

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

**PART – A**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 1. | | 11. | | 21. | | 31. | | 41. | | 51. | |
| 2. | | 12. | | 22. | | 32. | | 42. | | 52. | |
| 3. | | 13. | | 23. | | 33. | | 43. | | 53. | |
| 4. | | 14. | | 24. | | 34. | | 44. | | 54. | |
| 5. | | 15. | | 25. | | 35. | | 45. | | 55. | |
| 6. | | 16. | | 26. | | 36. | | 46. | | 56. | |
| 7. | | 17. | | 27. | | 37. | | 47. | | 57. | |
| 8. | | 18. | | 28. | | 38. | | 48. | | 58. | |
| 9. | | 19. | | 29. | | 39. | | 49. | | 59. | |
| 10. | | 20. | | 30. | | 40. | | 50. | | 60. | |

***Total Marks of Part – A***

**PART – B**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 61. | | 64. | | 67. | | 70. | | 73. | |
| 62. | | 65. | | 68. | | 71. | | 74. | |
| 63. | | 66. | | 69. | | 72. | | × | × |

***Total Marks of Part – B***

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕವು ಎರಡು ವಿಭಾಗಗಳನ್ನು ಹೊಂದಿವೆ. ಅವು ಎ – **ವಿಭಾಗ** ಮತ್ತು ಬಿ – **ವಿಭಾಗ.**

ii) ಎ – **ವಿಭಾಗ** 60 ಪ್ರಶ್ನೆಗಳನ್ನು ಹೊಂದಿದೆ ಮತ್ತು ಬಿ – **ವಿಭಾಗ** 14 ಪ್ರಶ್ನೆಗಳನ್ನು ಹೊಂದಿದೆ.

iii) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲೇ ಉತ್ತರಿಸಲು ಸ್ಥಳಾವಕಾಶ ಕೊಡಲಾಗಿದೆ.

iv) ಎ – **ವಿಭಾಗದಲ್ಲಿರುವ** ಸೂಚನೆಗಳನ್ನು ಅನುಸರಿಸಿ ಮತ್ತು ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲಿರುವ ನಾಲ್ಕು ಪರ್ಯಾಯ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿಕೊಂಡು ಕೊಟ್ಟಿರುವ ಜಾಗದಲ್ಲಿಯೇ ಬರೆಯಿರಿ.

v) ಬಿ – **ವಿಭಾಗದ** ಪ್ರತಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

## ಎ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಪೂರ್ಣ ಉತ್ತರವನ್ನು ಬರೆಯಿರಿ : $60 \times 1 = 60$

1. ಭಾರತದಲ್ಲಿ ಪೋರ್ಚುಗೀಸರ ಆಡಳಿತದ ಬಲವರ್ಧನೆ ಮಾಡಿದವನು

(A) ವಾಸ್ಕೋ-ಡ-ಗಾಮಾ (B) ಅಲ್ಮೇಡಾ

(C) ಬಾರ್ಥಲೋಮಿಯೋ (D) ಅಲ್ಫಾನ್ಸೋ-ಡಿ-ಅಲ್ಬುಕರ್ಕ್

*ಉತ್ತರ :* ________________

2. ವಾಂಡಿವಾಷ್ ಕದನದಲ್ಲಿ ಫ್ರೆಂಚರನ್ನು ಸೋಲಿಸಿದ ಇಂಗ್ಲೀಷರ ಸೇನಾಧಿಪತಿ

(A) ನೆಲ್ಸನ್ (B) ಐರ್ ಕೂಟ್

(C) ಹ್ಯಾವ್‌ಲಾಕ್ (D) ಜಾನ್ ನಿಕೋಲ್‌ಸನ್

*ಉತ್ತರ :* ________________

3. 1857 ರ ದಂಗೆಯಲ್ಲಿ ಕಾನ್ಪುರದಲ್ಲಿ ನಾನಾ ಸಾಹೇಬ ಹೋರಾಡಿದರೆ, ಬೇಗಂ ಹಜರತ್ ಮಹಲ್ ಹೋರಾಟ ನಡೆಸಿದ್ದು

(A) ಲಕ್ನೋದಲ್ಲಿ (B) ಝಾನ್ಸಿಯಲ್ಲಿ

(C) ಮೀರತ್‌ನಲ್ಲಿ (D) ಬರಾಕ್‌ಪುರದಲ್ಲಿ

*ಉತ್ತರ :* ________________

4. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ 'ಮಹಲ್' ಎಂದರೆ

(A) ಜಿಲ್ಲೆ (B) ರಾಜ್ಯ

(C) ತಾಲ್ಲೂಕು (D) ಅರಮನೆ

*ಉತ್ತರ :* ________________

5. ಮೋಗ್ಲಿಂಗ್ ಎಂಬ ಮಿಷನರಿ ಪ್ರಕಟಿಸಿದ ಕನ್ನಡದ ಮೊಟ್ಟಮೊದಲ ದಿನಪತ್ರಿಕೆ

(A) ಅಮೃತ ಬಜಾರ್ ಪತ್ರಿಕಾ (B) ಮಂಗಳೂರು ಸಮಾಚಾರ

(C) ದಿ ಹಿಂದೂ (D) ಶುಬೋಧ ಪತ್ರಿಕಾ

*ಉತ್ತರ :* ________________

6. ಭಾರತದ ಉದ್ದಗಲಕ್ಕೆ ಸರ್ವಋತು ರಾಜಮಾರ್ಗಗಳನ್ನು ನಿರ್ಮಿಸಲು ಯೋಜನೆ ಹಾಕಿದವನಾರು ?

(A) ಡಾಲ್‌ಹೌಸಿ (B) ಮುನ್ರೋ

(C) ವಿಲಿಯಂ ಬೆಂಟಿಂಕ್ (D) ಕರ್ಜನ್

*ಉತ್ತರ :* ________________

7. ಸರ್ದಾರ್ ವಲ್ಲಭಭಾಯಿ ಪಟೇಲರು 'ಪೋಲಿಸ್ ಕಾರ್ಯಾಚರಣೆ' ಕೈಗೊಂಡು ಭಾರತದ ಒಕ್ಕೂಟಕ್ಕೆ ಸೇರಿಸಿಕೊಂಡ ಸಂಸ್ಥಾನ

(A) ಜುನಾಗಢ (B) ಜಮ್ಮು ಮತ್ತು ಕಾಶ್ಮೀರ

(C) ಮೈಸೂರು (D) ಹೈದರಾಬಾದ್

ಉತ್ತರ : ____________________

8. ವಿಶಾಲ ಮೈಸೂರು ರಾಜ್ಯವು ಜನ್ಮ ತಾಳಿದ ದಿನ

(A) ನವೆಂಬರ್ 1, 1956 (B) ಆಗಸ್ಟ್ 14, 1947

(C) ನವೆಂಬರ್ 1, 1973 (D) ಆಗಸ್ಟ್ 15, 1947

ಉತ್ತರ : ____________________

9. ಆಸ್ಟ್ರಿಯದ ರಾಜಕುಮಾರ ಕೊಲೆ ಮಾಡಲ್ಪಟ್ಟ ಸ್ಥಳ ಯಾವುದು ?

(A) ಕಾನ್ಸ್‌ಟಾಂಟಿನೋಪಲ್ (B) ಸರಾಜೆವೋ

(C) ಪ್ಯಾರಿಸ್ (D) ಫ್ಲಾರೆನ್ಸ್

ಉತ್ತರ : ____________________

10. ಒಂದು ದೇಶದಲ್ಲಿ ಪ್ರಜಾಪ್ರಭುತ್ವದ ಯಶಸ್ಸು ಅವಲಂಬಿತವಾಗಿರುವ ಅಂಶ

(A) ಶಿಕ್ಷಣ ಪಡೆದ ಪ್ರಜೆಗಳ ಮೇಲೆ (B) ಜನರ ಸಂಘಟನೆಗಳ ಮೇಲೆ

(C) ಜನರ ಆರ್ಥಿಕ ಸ್ಥಿತಿಯ ಮೇಲೆ (D) ಜನರ ಆರೋಗ್ಯದ ಮೇಲೆ

ಉತ್ತರ : ____________________

11. ಯೂರೋಪಿನ ಒಕ್ಕೂಟದಲ್ಲಿ ರೂಢಿಯಲ್ಲಿರುವ ಹೊಸ ನಾಣ್ಯ ಪದ್ಧತಿ

(A) ರೂಪಾಯಿ (B) ಪೌಂಡ್

(C) ಡಾಲರ್ (D) ಯೂರೋ

ಉತ್ತರ : ____________________

12. ಬಂಡವಾಳಶಾಹಿ ಅಥವಾ ಕಮ್ಯುನಿಸ್ಟ್ ಬಣಗಳನ್ನು ಸೇರದ ದೇಶಗಳ ಗುಂಪನ್ನು ಏನೆಂದು ಗುರುತಿಸಿದರು ?

(A) ಅಣು ಜಗತ್ತು (B) ಪ್ರಾಚೀನ ಜಗತ್ತು

(C) ನವೀನ ಜಗತ್ತು (D) ತೃತೀಯ ಜಗತ್ತು

ಉತ್ತರ : ____________________

13. ಹಿಮಾಲಯದ ಅತ್ಯಂತ ಎತ್ತರದ ಶ್ರೇಣಿ

(A) ಹಿಮಾದ್ರಿ (B) ಹಿಮಾಚಲ

(C) ಸಿವಾಲಿಕ್ಸ್ (D) ವಿಂಧ್ಯಾ

ಉತ್ತರ : ____________________

14. ಶ್ರೀಗಂಧದ ಮರಗಳು ಬೆಳೆಯುವುದು

(A) ಮ್ಯಾಂಗ್ರೋವ್ ಅರಣ್ಯದಲ್ಲಿ (B) ನಿತ್ಯಹರಿದ್ವರ್ಣ ಕಾಡುಗಳಲ್ಲಿ

(C) ಎಲೆಗಳುದುರುವ ಮರಗಳ ಕಾಡುಗಳಲ್ಲಿ (D) ಮುಳ್ಳಿನ ಗಿಡ ಮತ್ತು ಪೊದೆಗಳ ಕಾಡುಗಳಲ್ಲಿ

ಉತ್ತರ : ____________________

15. ಅಲ್ಯೂಮಿನಿಯಂ ಲೋಹದ ತಯಾರಿಕೆಗೆ ಬಳಸಲ್ಪಡುವ ಕಚ್ಚಾವಸ್ತು

(A) ಮ್ಯಾಂಗನೀಸ್ (B) ಬಾಕ್ಸೈಟ್

(C) ಹೆಮಟೈಟ್ (D) ಮ್ಯಾಗ್ನಟೈಟ್

*ಉತ್ತರ :* ____________________

16. ದೆಹಲಿ ಸಮೀಪದ ಗುರ್‌ಗಾಂ ಸಂಶೋಧನಾ ಕೇಂದ್ರದಲ್ಲಿ ಸಂಶೋಧನೆ ಕೈಗೊಂಡಿರುವ ಶಕ್ತಿಯ ಮೂಲ

(A) ಗಾಳಿಯ ಶಕ್ತಿ (B) ಸೌರ ಶಕ್ತಿ

(C) ಜಲಶಕ್ತಿ (D) ಉಷ್ಣ ಶಕ್ತಿ

*ಉತ್ತರ :* ____________________

17. ಭಾರತದಿಂದ ಕಬ್ಬಿಣದ ಅದಿರು ಮುಖ್ಯವಾಗಿ ರಫ್ತಾಗುತ್ತಿರುವ ದೇಶ

(A) ಚೀನಾ (B) ಇರಾನ್

(C) ಜಪಾನ್ (D) ಇಟಲಿ

*ಉತ್ತರ :* ____________________

18. ಬುಟ್ಟಿ ಹೆಣೆಯುವುದು ಗೃಹ ಕೈಗಾರಿಕೆಯ ಉತ್ಪನ್ನವಾದರೆ, ವಿದ್ಯುತ್ ಪಂಖದ ತಯಾರಿಕೆ

(A) ಸಣ್ಣ ಕೈಗಾರಿಕಾ ಉತ್ಪನ್ನ (B) ಮಧ್ಯಮ ಗಾತ್ರದ ಕೈಗಾರಿಕಾ ಉತ್ಪನ್ನ

(C) ಬೃಹತ್ ಕೈಗಾರಿಕಾ ಉತ್ಪನ್ನ (D) ವಿಶೇಷ ಕೈಗಾರಿಕಾ ಉತ್ಪನ್ನ

*ಉತ್ತರ :* ____________________

19. ಗೃಹ ಕೈಗಾರಿಕೆಯು ಬೇಡಿಕೆಯನ್ನು ಅನುಸರಿಸಿ ವಸ್ತುಗಳನ್ನು ಉತ್ಪಾದಿಸುವುದು

(A) ರಾಷ್ಟ್ರೀಯ ಮಾರುಕಟ್ಟೆಗಾಗಿ (B) ರಾಜ್ಯದ ಮಾರುಕಟ್ಟೆಗಾಗಿ

(C) ಸ್ಥಳೀಯ ಮಾರುಕಟ್ಟೆಗಾಗಿ (D) ಅಂತರರಾಷ್ಟ್ರೀಯ ಮಾರುಕಟ್ಟೆಗಾಗಿ

*ಉತ್ತರ :* ____________________

20. ಭಾರತದ ರಫ್ತು ಮತ್ತು ಆಮದುಗಳು ಹೆಚ್ಚಾಗಿ ಸಾಗುವ ಮಾರ್ಗ

(A) ಭೂ-ಸಾರಿಗೆ ಮಾರ್ಗ (B) ಸಮುದ್ರ ಮಾರ್ಗ

(C) ರೈಲು ಮಾರ್ಗ (D) ವಾಯು ಮಾರ್ಗ

*ಉತ್ತರ :* ____________________

21. ಹೈದರಾಬಾದಿನ ನಿಜಾಮನು ಯಾವ ನೀತಿಗೆ ಒಳಪಟ್ಟ ಮೊದಲ ದೇಶೀಯ ದೊರೆ ?

(A) ಕಾರ್ಯ ನೇಮಕಾತಿ ನೀತಿ (B) ಮುಕ್ತ ವ್ಯಾಪಾರ ನೀತಿ

(C) ಸಹಾಯಕ ಸೈನ್ಯ ಪದ್ಧತಿ ನೀತಿ (D) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

*ಉತ್ತರ :* ____________________

22. ಮೈಸೂರಿನ ಒಡೆಯರಲ್ಲಿ ಯಾರನ್ನು 'ಆಧುನಿಕ ಮೈಸೂರು ನಿರ್ಮಾಪಕ' ಎಂದು ಕರೆಯಲಾಗುತ್ತದೆ ?

(A) ನರಸರಾಜ ಒಡೆಯರ್ (B) ನಾಲ್ವಡಿ ಕೃಷ್ಣರಾಜ ಒಡೆಯರ್

(C) ರಾಜಾ ಒಡೆಯರ್ (D) ಚಿಕ್ಕದೇವರಾಜ ಒಡೆಯರ್

*ಉತ್ತರ :* ________________________________________________________

23. ವೇದಗಳ ಮೂಲ ಚಿಂತನೆಗಳ ಆಧಾರದ ಮೇಲೆ ಹಿಂದೂ ಸಮಾಜದ ಸುಧಾರಣೆಗಾಗಿ "ವೇದಗಳಿಗೆ ಹಿಂದಿರುಗಿ" ಎಂದು ಕರೆ ಕೊಟ್ಟವರು

(A) ಆತ್ಮಾರಾಮ ಪಾಂಡುರಂಗ (B) ದಯಾನಂದ ಸರಸ್ವತಿ

(C) ರಾಜಾ ರಾಮ್‌ಮೋಹನ್ ರಾಯ್ (D) ಸ್ವಾಮಿ ವಿವೇಕಾನಂದ

*ಉತ್ತರ :* ________________________________________________________

24. ಶೋಷಣೆಯನ್ನು ತಪ್ಪಿಸಿ, ಸಮಾಜವನ್ನು ಆಧುನೀಕರಣಗೊಳಿಸಲು ಯಾವ ಸಾಧನ ಅಗತ್ಯವೆಂದು ಜ್ಯೋತಿರಾವ್ ಫುಲೆ ನಂಬಿದ್ದರು ?

(A) ಕಾರ್ಮಿಕ ಚಳುವಳಿ (B) ತುಳಿಯಲ್ಪಟ್ಟವರಿಗೆ ಮೀಸಲಾತಿ

(C) ಶಿಕ್ಷಣವನ್ನು ನೀಡುವುದು (D) ವಿಧವಾ ಪುನರ್ವಿವಾಹಕ್ಕೆ ಪ್ರೋತ್ಸಾಹ

*ಉತ್ತರ :* ________________________________________________________

25. ಮುಧೋಳ ರಾಜ್ಯದ ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ದಂಗೆ ಏಳಲು ಯಾವ ಕಾಯಿದೆ ಕಾರಣವಾಯಿತು ?

(A) ರೆಗ್ಯುಲೇಟಿಂಗ್ ಶಾಸನ (B) ಶಸ್ತ್ರಾಸ್ತ್ರ ಕಾಯಿದೆ

(C) ಎನ್‌ಲಿಸ್ಟ್‌ಮೆಂಟ್ ಕಾಯಿದೆ (D) ಪತ್ರಿಕಾ ಶಾಸನ

*ಉತ್ತರ :* ________________________________________________________

26. ಸರ್ದಾರ್ ವಲ್ಲಭಭಾಯಿ ಪಟೇಲರನ್ನು 'ಭಾರತದ ಉಕ್ಕಿನ ಮನುಷ್ಯ' ಎಂದು ಏಕೆ ಕರೆಯಲಾಗುತ್ತದೆ ?

(A) ಭಾರತದ ಗೃಹಮಂತ್ರಿಯಾಗಿದ್ದರಿಂದ

(B) ಜುನಾಗಢವನ್ನು ಭಾರತದ ಒಕ್ಕೂಟಕ್ಕೆ ಸೇರಿಸಿದ್ದರಿಂದ

(C) ದೇಶೀಯ ರಾಜ್ಯಗಳನ್ನು ಭಾರತದ ಒಕ್ಕೂಟಕ್ಕೆ ಸೇರಿಸಿದ್ದರಿಂದ

(D) ಅರಸರಿಗೆ ರಾಜಧನವನ್ನು ಕೊಡಲು ಒಪ್ಪಿದ್ದರಿಂದ

*ಉತ್ತರ :* ________________________________________________________

27. ಮಾವೋ ತ್ಸೆ ತುಂಗರ 'ಮುಂಜಿಗಿತ ನೀತಿ'ಯಿಂದಾಗಿ ಚೀನಾದಲ್ಲಿ ದೊರೆತ ಫಲಿತಾಂಶವೇನು ?

(A) ರೈತರಲ್ಲಿ ತೀವ್ರ ಅಸಮಾಧಾನ ಉಂಟಾಯಿತು (B) ಉತ್ತಮ ಆರ್ಥಿಕ ಪ್ರಗತಿ

(C) ಸಾಮೂಹಿಕ ಕೃಷಿಯನ್ನು ಆರಂಭಿಸಲಾಯಿತು (D) ರೈತರು ತಮ್ಮ ಸ್ವಂತ ಹಿಡುವಳಿಗಳನ್ನು ಕಳೆದುಕೊಂಡರು

*ಉತ್ತರ :* ________________________________________________________

28. ಮೊದಲ ವಿಶ್ವಯುದ್ಧದ ನಂತರ ಖಾಯಂ ಆಗಿ ಶಾಂತಿಯನ್ನು ನೆಲೆಸುವಂತೆ ಯಾವ ಸಂಸ್ಥೆಯನ್ನು ಸ್ಥಾಪಿಸಲಾಯಿತು ?

(A) ರೆಡ್ ಕ್ರಾಸ್ ಸಂಸ್ಥೆ (B) ಆಮ್ನೆಸ್ಟಿ ಇಂಟರ್‌ನ್ಯಾಷನಲ್

(C) ರಾಷ್ಟ್ರಗಳ ಸಂಘ (D) ವಿಶ್ವಸಂಸ್ಥೆ

*ಉತ್ತರ :* ________________________________________________________

29. ಶಸ್ತ್ರಾಸ್ತ್ರಗಳ ಪೈಪೋಟಿ ಎಂದರೆ

(A) ದೇಶಗಳ ನಡುವೆ ಉಂಟಾದ ಪರಸ್ಪರರ ಬಗೆಗಿನ ಅನುಮಾನ

(B) ಶಸ್ತ್ರಾಸ್ತ್ರಗಳ ಆಧುನೀಕರಣ ಮತ್ತು ಸೈನ್ಯದ ಹೆಚ್ಚಳ

(C) ಶಸ್ತ್ರಾಸ್ತ್ರಗಳ ಸಂಗ್ರಹ

(D) ಶಸ್ತ್ರಾಸ್ತ್ರಗಳ ಆಧುನೀಕರಣ ಪೈಪೋಟಿ

*ಉತ್ತರ :* ____________________

30. ಶೀತಲ ಸಮರ ಎಂದರೆ

(A) ಅತ್ಯುಗ್ರ ರಾಷ್ಟ್ರೀಯತೆ

(B) ಶಸ್ತ್ರಾಸ್ತ್ರಗಳ ಪೈಪೋಟಿ

(C) ರಹಸ್ಯ ಮೈತ್ರಿಕೂಟಗಳು

(D) ಎರಡು ಶಕ್ತಿ ಬಣಗಳ ನಡುವಿನ ಸೈದ್ಧಾಂತಿಕ ಭಿನ್ನಾಭಿಪ್ರಾಯ

*ಉತ್ತರ :* ____________________

31. ವಿಶ್ವಸಂಸ್ಥೆಯ ಯಾವ ಅಂಗ ಎಲ್ಲಾ ಸದಸ್ಯ ದೇಶಗಳನ್ನು ಒಳಗೊಂಡಿದೆ ?

(A) ಭದ್ರತಾ ಸಮಿತಿ

(B) ಆರ್ಥಿಕ ಮತ್ತು ಸಾಮಾಜಿಕ ಸಮಿತಿ

(C) ಸಾಮಾನ್ಯ ಸಭೆ

(D) ಧರ್ಮದರ್ಶಿ ಸಮಿತಿ

*ಉತ್ತರ :* ____________________

32. ಭದ್ರತಾ ಸಮಿತಿಯಲ್ಲಿರುವ ಯಾರಿಗೆ 'ವಿಟೋ' ಚಲಾಯಿಸುವ ಅಧಿಕಾರವಿದೆ ?

(A) ಹಂಗಾಮಿ ಸದಸ್ಯರಿಗೆ

(B) ಖಾಯಂ ಸದಸ್ಯರಿಗೆ

(C) ನಾಮಕರಣಗೊಂಡ ಸದಸ್ಯರಿಗೆ

(D) ನೇಮಿತ ಸದಸ್ಯರಿಗೆ

*ಉತ್ತರ :* ____________________

33. ವಿಶ್ವ ಆರೋಗ್ಯ ಸಂಸ್ಥೆಯ ಅತಿ ಹಿರಿಯ ಸಾಧನೆಯೆಂದರೆ

(A) ಅಂಟು ರೋಗಗಳ ಅಂತ್ಯ

(B) ಬಡತನದ ನಿವಾರಣೆ

(C) ಪರಿಸರ ರಕ್ಷಣೆ

(D) ಸಿಡುಬು ರೋಗದ ನಿವಾರಣೆ

*ಉತ್ತರ :* ____________________

34. ಕೆಳಗಿನವುಗಳಲ್ಲಿ ಮಾನವನ ಅಸ್ತಿತ್ವ ಮತ್ತು ಬೆಳವಣಿಗೆಗೆ ಯಾವುದು ಅತ್ಯವಶ್ಯಕವಾಗಿದೆ ?

(A) ಮೂಲಭೂತ ಹಕ್ಕುಗಳು

(B) ಜನ್ಮಜಾತ ಹಕ್ಕುಗಳು

(C) ಮಾನವ ಹಕ್ಕುಗಳು

(D) ವಿಶೇಷ ಹಕ್ಕುಗಳು

*ಉತ್ತರ :* ____________________

35. ವರ್ಣಭೇದ ನೀತಿ ಮತ್ತು ಗುಲಾಮಗಿರಿಯ ವಿರುದ್ಧ ಹೋರಾಡಿದವರಲ್ಲಿ ಮೊದಲಿಗರಾರು ?

(A) ಜಾನ್ ಎಫ್. ಕೆನಡಿ (B) ಗಾಂಧೀಜಿ

(C) ನೆಲ್ಸನ್ ಮಂಡೇಲಾ (D) ಅಬ್ರಹಾಂ ಲಿಂಕನ್

ಉತ್ತರ : ______________________

36. ಕೆಳಗಿನವುಗಳಲ್ಲಿ ಮಾನವ ಜನಾಂಗಕ್ಕೆ ಅತ್ಯಂತ ಅಪಾಯಕಾರಿಯಾಗಿರುವುದು ಯಾವುದು ?

(A) ಜೈವಿಕ ಅಸ್ತ್ರಗಳು (B) ರಾಸಾಯನಿಕಗಳು

(C) ಅಣ್ವಸ್ತ್ರಗಳು (D) ಕ್ಷಿಪಣಿಗಳು

ಉತ್ತರ : ______________________

37. ಭಾರತವನ್ನು 28 ರಾಜ್ಯಗಳು, 1 ರಾಷ್ಟ್ರೀಯ ರಾಜಧಾನಿ ವಿಶೇಷ ಸ್ಥಾನದ ದೆಹಲಿ ಮತ್ತು 6 ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲಾಗಿರುವುದೇಕೆಂದರೆ

(A) ಸುಭದ್ರ ಆಡಳಿತಕ್ಕಾಗಿ (B) ವಿಳಂಬ ಗತಿಯ ಆಡಳಿತಕ್ಕಾಗಿ

(C) ಕೆಟ್ಟ ಆಡಳಿತಕ್ಕಾಗಿ (D) ಅತ್ಯಂತ ಬಿಗಿ ಆಡಳಿತಕ್ಕಾಗಿ

ಉತ್ತರ : ______________________

38. ಫರೇಲ್ ನಿಯಮದ ಪ್ರಕಾರ ಆಗ್ನೇಯ ವಾಣಿಜ್ಯ ಮಾರುತಗಳು ನೈಋತ್ಯ ಮಾನ್‌ಸೂನ್ ಮಾರುತಗಳಾಗಿ ಪರಿವರ್ತನೆ ಹೊಂದುವುದೇಕೆಂದರೆ

(A) ಉತ್ತರದಲ್ಲಿ ಕಡಿಮೆ ಒತ್ತಡದ ಪ್ರದೇಶ ರಚನೆಯಾಗುವುದರಿಂದ

(B) ದಕ್ಷಿಣದಲ್ಲಿ ಕಡಿಮೆ ಒತ್ತಡದ ಪ್ರದೇಶ ರಚನೆಯಾಗುವುದರಿಂದ

(C) ಪೂರ್ವದಲ್ಲಿ ಕಡಿಮೆ ಒತ್ತಡದ ಪ್ರದೇಶ ರಚನೆಯಾಗುವುದರಿಂದ

(D) ಪಶ್ಚಿಮದಲ್ಲಿ ಹೆಚ್ಚು ಒತ್ತಡದ ಪ್ರದೇಶ ರಚನೆಯಾಗುವುದರಿಂದ

ಉತ್ತರ : ______________________

39. ಗೃಹ ಮತ್ತು ಸಣ್ಣ ಕೈಗಾರಿಕೆಗಳಿಗೆ ಭಾರತ ಏಕೆ ಹೆಚ್ಚು ಸೂಕ್ತವಾದ ದೇಶವಾಗಿದೆ ?

(A) ಉದ್ಯೋಗಗಳನ್ನು ಒದಗಿಸುವುದರಿಂದ (B) ಕಡಿಮೆ ಬಂಡವಾಳ ಸಾಕಾಗುವುದರಿಂದ

(C) ಸ್ಥಳೀಯ ಸಂಪನ್ಮೂಲಗಳ ಮೇಲೆ ಅವಲಂಬಿತ (D) ಕಡಿಮೆ ವಿದ್ಯುಚ್ಛಕ್ತಿ ಬಳಕೆ

ಉತ್ತರ : ______________________

40. ರಾಷ್ಟ್ರೀಯ ಉದ್ಯಾನಗಳನ್ನು ಏಕೆ ಸೃಷ್ಟಿಸಲಾಗಿದೆ ?

(A) ಅರಣ್ಯಗಳ ರಕ್ಷಣೆಗಾಗಿ (B) ಪಕ್ಷಿಗಳ ರಕ್ಷಣೆಗಾಗಿ

(C) ವನ್ಯ ಪ್ರಾಣಿಗಳ ರಕ್ಷಣೆಗಾಗಿ (D) ಹುಲಿಗಳ ರಕ್ಷಣೆಗಾಗಿ

ಉತ್ತರ : ______________________

41. ತೇಗ ಮತ್ತು ಸಾಲ್ ಮರಗಳು ಎಲೆಗಳುದುರುವ ಮರಗಳ ಕಾಡುಗಳಲ್ಲಿ ಬೆಳೆದರೆ ನಿತ್ಯಹರಿದ್ವರ್ಣದ ಕಾಡುಗಳಲ್ಲಿ ಬೆಳೆಯುವ ಮರಗಳು

(A) ಬೆತ್ತ-ತಾಳೆ (B) ಕಳ್ಳಿಗಿಡ-ಖರ್ಜೂರ

(C) ಬಬೂಲ್-ಕಸಾವಿ (D) ಎಬೋನಿ-ಮಹಾಗನಿ

*ಉತ್ತರ :* ____________________

42. ಭಾರತದಲ್ಲಿ ಯಾವ ನೀರಾವರಿ ಪದ್ಧತಿ ಪ್ರಧಾನವಾಗಿ ಪ್ರಚಲಿತವಾಗಿದೆ ?

(A) ಬಾವಿ ನೀರಾವರಿ (B) ಕೆರೆ ನೀರಾವರಿ

(C) ಕಾಲುವೆ ನೀರಾವರಿ (D) ಹನಿ ನೀರಾವರಿ

*ಉತ್ತರ :* ____________________

43. ಕೊಳವೆ ಮಾರ್ಗಗಳು ತೈಲ, ನೈಸರ್ಗಿಕ ಅನಿಲ ಮತ್ತು ಖನಿಜ ತೈಲವನ್ನು ಸಾಗಿಸಲು ಏಕೆ ಹೆಚ್ಚು ಸೌಲಭ್ಯದಾಯಕ ?

(A) ಸರಕುಗಳನ್ನು ಏರಿಸುವ ಇಳಿಸುವ ತೊಂದರೆಯಿಲ್ಲ

(B) ಕೇವಲ ಬಂದರುಗಳ ಸಂಪರ್ಕ ಹೊಂದಿದೆ

(C) ಕಾಲ ವಿಳಂಬ ಮತ್ತು ನಷ್ಟಗಳು ತಪ್ಪುತ್ತವೆ

(D) ಸಾರಿಗೆಯ ದೃಷ್ಟಿಯಿಂದ ಕಡಿಮೆ ವೆಚ್ಚದಾಯಕವಾಗಿದೆ

*ಉತ್ತರ :* ____________________

44. ಭಾರತದಲ್ಲಿ ಏಕೆ ಒಳನಾಡಿನ ಜಲಮಾರ್ಗಗಳು ಇತ್ತೀಚೆಗೆ ಪ್ರಾಮುಖ್ಯತೆ ಕಳೆದುಕೊಳ್ಳುತ್ತಿವೆ ?

(A) ಸಮಾಂತರವಾಗಿ ರಸ್ತೆ, ರೈಲುಗಳ ನಿರ್ಮಾಣ (B) ವಾಯುಮಾರ್ಗಗಳು

(C) ವೆಚ್ಚದಾಯಕವಾದ್ದರಿಂದ (D) ಕಾಲ ವಿಳಂಬವಾಗುವುದರಿಂದ

*ಉತ್ತರ :* ____________________

45. ಸರ್ಕಾರವು ರೈತರನ್ನು ಪ್ರಕೃತಿಯ ವಿಕೋಪಗಳಿಂದ ರಕ್ಷಿಸಲು ಯಾವ ಕ್ರಮವನ್ನು ಕೈಗೊಂಡಿದೆ ?

(A) ಭಾರತದ ಆಹಾರ ನಿಗಮದ ಸ್ಥಾಪನೆ (B) ಸಹಕಾರಿ ಸಂಘಗಳ ಸ್ಥಾಪನೆ

(C) ಬೆಳೆ ವಿಮೆ (D) ಜನತಾ ಬಜಾರ್‌ಗಳ ಸ್ಥಾಪನೆ

*ಉತ್ತರ :* ____________________

46. ಯಾವ ಸಂಸ್ಥೆ ಗುಡಿ ಮತ್ತು ಸಣ್ಣ ಕೈಗಾರಿಕೆಗಳಿಗೆ ಸಾಲದ ರೂಪದಲ್ಲಿ ಧನ ಸಹಾಯ ನೀಡುತ್ತಿದೆ ?

(A) ರಾಜ್ಯ ಹಣಕಾಸು ನಿಗಮ (B) ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್

(C) ರಾಷ್ಟ್ರೀಯ ಬ್ಯಾಂಕುಗಳು (D) ಭಾರತೀಯ ಸ್ಟೇಟ್ ಬ್ಯಾಂಕ್

*ಉತ್ತರ :* ____________________

47. ಪ್ರಾಚೀನ ಕಾಲದಿಂದಲೂ ಭಾರತದಿಂದ ರಫ್ತಾಗುತ್ತಿರುವ ಸಾಮಗ್ರಿ ಯಾವುದು ?

(A) ಚೀಟಿ ಬಟ್ಟೆಗಳು (B) ವಜ್ರಗಳು

(C) ಸಾಂಬಾರ ಪದಾರ್ಥಗಳು (D) ಮಸ್ಲಿನ್ ಬಟ್ಟೆ

*ಉತ್ತರ :* ____________________

48. 1773 ರಲ್ಲಿ ರೆಗ್ಯುಲೇಟಿಂಗ್ ಶಾಸನವನ್ನು ಜಾರಿಗೆ ತಂದಿದ್ದು ಏಕೆ ಅತ್ಯವಶ್ಯಕವಾಯಿತು ?

(A) ಸಾಮ್ರಾಜ್ಯ ವಿಸ್ತರಣೆಗೆ

(B) ಆಡಳಿತದಲ್ಲಿ ಮಧ್ಯ ಪ್ರವೇಶ ಮಾಡಲು

(C) ಭಾರತವನ್ನು ಆಳಲು

(D) ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತವನ್ನು ನಿಯಂತ್ರಿಸಲು

*ಉತ್ತರ :* ____________________

49. ಪ್ರಾಂತ್ಯಗಳಲ್ಲಿ ವಿಫಲವಾಗಿದ್ದ ಯಾವ ಬಗೆಯ ಸರ್ಕಾರವನ್ನು 1935 ರಲ್ಲಿ ಕೇಂದ್ರದಲ್ಲಿ ಜಾರಿಗೆ ತರಲಾಯಿತು ?

(A) ಪ್ರಜಾಸತ್ತಾತ್ಮಕ ಸರ್ಕಾರ (B) ರಾಜ ಪ್ರಭುತ್ವ

(C) ದ್ವಿಮುಖ ಸರ್ಕಾರ (D) ಸಮಾಜವಾದಿ ಸರ್ಕಾರ

*ಉತ್ತರ :* ____________________

50. ಅನಿ ಬೆಸೆಂಟರು ಸ್ಥಾಪಿಸಿದ ಕೇಂದ್ರೀಯ ಹಿಂದೂ ಕಾಲೇಜಿನ ಗುರಿ

(A) ಹಿಂದೂ ಸಂಸ್ಕೃತಿಯ ಪುನರುಜ್ಜೀವನ (B) ಸಮಾನತೆಯ ಭಾವವನ್ನು ಬೆಳೆಸುವುದು

(C) ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು (D) ಸಹಜೀವನ ನಡೆಸುವಂತೆ ಮಾಡಲು

*ಉತ್ತರ :* ____________________

51. ಸಂಗೊಳ್ಳಿ ರಾಯಣ್ಣ ಇಂಗ್ಲಿಷರ ವಿರುದ್ಧ ಹೋರಾಡಲು ಕಾರಣವೇನೆಂದರೆ ಅವನು

(A) ಕಿತ್ತೂರಿನ ಅರಸನಾಗಲು

(B) ಇಂಗ್ಲೀಷರನ್ನು ಶಿಕ್ಷಿಸಲು

(C) ಕಿತ್ತೂರನ್ನು ಮರಳಿ ಗೆಲ್ಲಲು

(D) ರಾಣಿ ಚೆನ್ನಮ್ಮಳ ದತ್ತಕ ಪುತ್ರನನ್ನು ಅರಸನನ್ನಾಗಿ ಮಾಡಲು

*ಉತ್ತರ :* ____________________

52. ಆಕ್ರಮಿತ ಜಮ್ಮು ಮತ್ತು ಕಾಶ್ಮೀರದ ಭಾಗವನ್ನು ಏನೆಂದು ಕರೆಯಲಾಗುತ್ತದೆ ?

(A) ಆಜಾದ್ ಕಾಶ್ಮೀರ (B) ಪಾಕ್ ಆಕ್ರಮಿತ ಕಾಶ್ಮೀರ

(C) ವಿಶೇಷ ರಾಜ್ಯ (D) ಅಕಾಶಿಚಿನ್

*ಉತ್ತರ :* ____________________

53. ಯಾವ ಕಾರಣಕ್ಕಾಗಿ ಸ್ಟ್ಯಾಲಿನ್ ಇಂದಿಗೂ ಸ್ಮರಣಾರ್ಹ ?

(A) ವಾರ್ಷಿಕ ಯೋಜನೆಗೆ (B) ಖಾಸಗಿ ಭೂ-ಒಡೆತನವನ್ನು ತೆಗೆದುಹಾಕಿದ್ದಕ್ಕೆ

(C) ಕಾರ್ಯಗತ ಪಂಚವಾರ್ಷಿಕ ಯೋಜನೆಗೆ (D) ಸಾಮೂಹಿಕ ಸಾಗುವಳಿಯನ್ನು ರೂಢಿಗೆ ತಂದಿದ್ದಕ್ಕೆ

*ಉತ್ತರ :* ____________________

54. ಇಟಲಿ ಮತ್ತು ಜರ್ಮನಿಗಳಲ್ಲಿ ಸರ್ವಾಧಿಕಾರ ಹೊರಮೊಮ್ಮಲು ಕಾರಣ

(A) ಮೊದಲ ವಿಶ್ವಯುದ್ಧ (B) ಸಾಮಾಜಿಕ ಅವ್ಯವಸ್ಥೆ

(C) ಅರಾಜಕತೆ (D) ಆರ್ಥಿಕ ದುಃಸ್ಥಿತಿ

ಉತ್ತರ : ______

55. ಮೇಜಿ ಪುನರಾಗಮನದ ಪರಿಣಾಮವಾಗಿ ಜಪಾನ್

(A) ಶ್ರೀಮಂತ ಕೈಗಾರಿಕಾ ದೇಶವಾಯಿತು (B) ವ್ಯವಸಾಯದಲ್ಲಿ ಅಭಿವೃದ್ಧಿ ಹೊಂದಿತು

(C) ತೋಟಗಾರಿಕಾ ದೇಶವಾಯಿತು (D) ಪೂರ್ಣ ಅಕ್ಷರಸ್ಥರ ದೇಶವಾಯಿತು

ಉತ್ತರ : ______

56. ಕಾಮನ್‌ವೆಲ್ತ್ ರಾಷ್ಟ್ರಗಳ ಒಕ್ಕೂಟ ಎಂದರೆ

(A) ಯೂರೋಪಿಯನ್ ದೇಶಗಳ ಒಕ್ಕೂಟ

(B) ಹೊಸ ಇಂಗ್ಲಿಷ್ ವಸಾಹತುಗಳ ಒಕ್ಕೂಟ

(C) ಬ್ರಿಟನ್ನಿನ ಸಾಮ್ರಾಜ್ಯದ ಅಡಿಯಲ್ಲಿ ಹಿಂದೆ ವಸಾಹತುಗಳಾಗಿದ್ದ ರಾಷ್ಟ್ರಗಳ ಒಕ್ಕೂಟ

(D) ಇಂಗ್ಲೆಂಡಿನ ಒಂದು ಸ್ವಯಂಸೇವಾ ಸಂಸ್ಥೆ

ಉತ್ತರ : ______

57. ಉತ್ತರ ಭಾರತದ ಮಹಾಮೈದಾನ ಏಕೆ ಭಾರತದ 'ಹೃದಯ ಭಾಗ' ಎನ್ನಿಸಿಕೊಂಡಿದೆ ?

(A) ಸದಾ ಹರಿಯುವ ನದಿಗಳಿಂದ (B) ಅದು ಸಮತಟ್ಟಾಗಿದೆ

(C) ಕೃಷಿಗೆ ಫಲವತ್ತಾಗಿದೆ (D) ನೀರಾವರಿ ಕಾಲುವೆಗಳಿವೆ

ಉತ್ತರ : ______

58. ಕಾರ್ಲ್ ಮಾರ್ಕ್ಸ್ ಪ್ರಕಾರ ಊಳಿಗಮಾನ್ಯ ಪದ್ಧತಿಯ ಸಮಸ್ಯೆಗಳಿಗಿದ್ದ ಏಕೈಕ ಪರಿಹಾರ

(A) ಕಾರ್ಮಿಕ ನೇತೃತ್ವದ ಸರ್ವಾಧಿಕಾರ (B) ಝಾರ್‌ನ ಆಡಳಿತ

(C) ರೈತರ ಆಡಳಿತ (D) ಜನಸಾಮಾನ್ಯರ ಆಡಳಿತ

ಉತ್ತರ : ______

59. ರಾಷ್ಟ್ರಗಳ ಸಂಘ ವಿಫಲವಾಗಲು ಕಾರಣವೇನೆಂದರೆ

(A) ಅಮೇರಿಕಾ ಅದಕ್ಕೆ ಸೇರ್ಪಡೆಯಾಗಲಿಲ್ಲ (B) ಹಲವಾರು ದೇಶಗಳು ಅದರಿಂದ ಹೊರಕ್ಕೆ ಉಳಿದವು

(C) ಅದಕ್ಕೆ ತನ್ನದೇ ಆದ ಸೈನಿಕ ಶಕ್ತಿ ಇರಲಿಲ್ಲ (D) ನಿಶ್ಶಸ್ತ್ರೀಕರಣವನ್ನು ಸಾಧಿಸುವಲ್ಲಿ ವಿಫಲವಾಯಿತು

ಉತ್ತರ : ______

60. 'ಮಂಚು' ಸಂತತಿ ಚೀನಾವನ್ನು ಆಳಿದ ಕೊನೆಯ ರಾಜಮನೆತನವಾಗಲು ಕಾರಣ

(A) ಅದರ ಚಕ್ರವರ್ತಿಗಳ ಬಲಹೀನತೆ ಮತ್ತು ಅದಕ್ಷತೆ

(B) ಫ್ರಾನ್ಸ್ ಜೊತೆಗೆ ವ್ಯಾಪಾರ ಸಂಪರ್ಕವಿರಿಸಿಕೊಂಡಿದ್ದು

(C) ಇಂಗ್ಲೆಂಡ್ ಚೀನಾವನ್ನು ಸೋಲಿಸಿದ್ದು

(D) ಅಮೇರಿಕಾ ವ್ಯಾಪಾರದ ಹಕ್ಕನ್ನು ಪಡೆದಿದ್ದು

ಉತ್ತರ : ______

## ಬಿ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಎರಡೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 6 × 2 = 12

61. ಡೂಪ್ಲೆ ಯಾರು ? ಅವನ ಮಹತ್ವಾಕಾಂಕ್ಷೆ ಏನಾಗಿತ್ತು ?

62. ಶ್ರೀರಂಗಪಟ್ಟಣದ ಒಪ್ಪಂದದ ಯಾವ ಎರಡು ಷರತ್ತುಗಳು ಟಿಪ್ಪುವಿನ ಭವಿಷ್ಯವನ್ನು ಮಸುಕಾಗಿಸಿದವು ?

63. ವಿಶ್ವಸಂಸ್ಥೆಯು ಮಕ್ಕಳ ವಿಕಾಸಕ್ಕೆ ಪಟ್ಟಿ ಮಾಡಿರುವ ಹಕ್ಕುಗಳಲ್ಲಿ ಯಾವುದಾದರೂ ನಾಲ್ಕನ್ನು ನಮೂದಿಸಿ.

64. ಉತ್ಪಾದಕ ಕೈಗಾರಿಕೆಗಳು ಎಂದರೇನು ? ಅವುಗಳ ಪ್ರಮುಖ ವಿಭಾಗಗಳಾವುವು ?

65. ಭಾರತದ ಯೋಜನಾ ಆಯೋಗದ ಎರಡು ಮುಖ್ಯ ಕಾರ್ಯಗಳಾವುವು ?

66. ಸರ್ ಎಂ. ವಿಶ್ವೇಶ್ವರಯ್ಯನವರ ಅಭಿವೃದ್ಧಿ ಕಾರ್ಯಗಳಲ್ಲಿ ಯಾವುದಾದರೂ ಎರಡನ್ನು ನಮೂದಿಸಿ.

ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಮೂರು ವಾಕ್ಯಗಳಲ್ಲಿ ಉತ್ತರಿಸಿ : $4 \times 3 = 12$

67. 1857 ರ ದಂಗೆಯು ವಿಫಲಕ್ಕೆ ಯಾವುದಾದರೂ ಮೂರು ಕಾರಣಗಳನ್ನು ಪಟ್ಟಿ ಮಾಡಿ.

68. ವಿಶ್ವಸಂಸ್ಥೆಯ ಗುರಿಗಳೇನು ?

69. ಜೀವನಾಧಾರ ಬೇಸಾಯ, ವಾಣಿಜ್ಯ ಬೇಸಾಯ ಮತ್ತು ಮಿಶ್ರ ಬೇಸಾಯ ಎಂದರೇನು ?

70. ಭಾರತದ ವಿದೇಶಿ ವ್ಯಾಪಾರದ ಯಾವುದಾದರೂ ಮೂರು ಲಕ್ಷಣಗಳನ್ನು ನಮೂದಿಸಿ.

ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $3 \times 4 = 12$

71. ಮಂದಗಾಮಿಗಳು ತೀವ್ರಗಾಮಿಗಳಿಗಿಂತ ಹೇಗೆ ಭಿನ್ನವಾಗಿದ್ದರು ? ಮಂದಗಾಮಿಗಳ ನಾಲ್ಕು ಬೇಡಿಕೆಗಳೇನಾಗಿದ್ದವು ?

72. ಬಡತನ ಎಂದರೇನು ? ಅದರ ನಿವಾರಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

73. ಭಾರತವು ವ್ಯವಸಾಯ ಕ್ಷೇತ್ರದಲ್ಲಿ ಹಿಂದುಳಿದಿರಲು ಕಾರಣಗಳೇನು ?

74. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಕೆಳಗೆ ಕೊಟ್ಟಿರುವುದನ್ನು ಗುರುತಿಸಿ : 1 + 3 = 4

a) ಕೊಲ್ಕತಾ

b) ಕಾವೇರಿ ನದಿ

c) $82\frac{1}{2}°$ ಪೂರ್ವ ರೇಖಾಂಶ

***ಸೂಚನೆ*** : ಅಂಧ ವಿದ್ಯಾರ್ಥಿಗಳಿಗೆ ಮಾತ್ರ : ಪರ್ಯಾಯ ಪ್ರಶ್ನೆ: (ಪ್ರಶ್ನೆ ಸಂಖ್ಯೆ 74ಕ್ಕೆ ಬದಲಾಗಿ) 4

ಭಾರತದ ಮೇಲ್ಮೈ ಲಕ್ಷಣಗಳ ವಿಭಾಗಗಳಾವುವು ? ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಕರಾವಳಿ ಪ್ರದೇಶಗಳ ಪ್ರಾಮುಖ್ಯತೆಯೇನು ?